ದಿನಾಂಕ 11.07.2025 ರಂದು ಸಾಕ್ಷಿಗೆ ಪ್ರಮಾಣೀಕರಿಸಲಾಯಿತು.

ಪಾಟಿ ಸವಾಲು ಪ್ರತಿವಾದಿ ಪರ ಶ್ರೀ ಓ.ಜೆ.ವಕೀಲರಿಂದಃ-

1. ನಾನು, ನನ್ನ ತಂದೆ ತಾಯಿ ಮತ್ತು 2 ನೇ ಪ್ರತಿವಾದಿಗಳು ಒಟ್ಟು ಕುಟುಂಬದಲ್ಲಿ ವಾಸಿಸುತ್ತಿದ್ದೇವೆ ಎಂದಕು ತೋರಿಸಲು ಯಾವುದೇ ದಾಖಲೆಗಳು ಇವೆಯೇ ಎಂದರೆ ಅಂತಹ ದಾಖಲೆಗಳನ್ನು ಇಟ್ಟುಕೊಳ್ಳಲಾಗುವುದಿಲ್ಲ ಎಂದು ನುಡಿಯುತ್ತಾರೆ. ನನ್ನ ಪಡಿತರ ಚೀಟಿ ನನ್ನ ಬಳಿ ಇದೆ. ಸದರಿ ಪಡಿತರ ಚೀಟಿಯನ್ನು ನಾನು ವಿಭಾಗ ಆದ ಮೇಲೆ ಮಾಡಿಸಿಕೊಂಡಿರುತ್ತೇನೆ. ಸದರಿ ಪಡಿತರ ಚೀಟಿಯಲ್ಲಿ ನನ್ನ ಹೆಂಡತಿ ಮತ್ತು ಮಕ್ಕಳು ಇರುತ್ತಾರೆ. ನನ್ನ ಹೆಂಡತಿ ಹೆಸರು ಕುಸುಮಾ, ಮಕ್ಕಳ ಹೆಸರು ಮಲ್ಲಿಕಾರ್ಜುನ ಮತ್ತು ಸುಮ. ಪಡಿತರ ಚೀಟಿಯನ್ನು ಹಾಜರುಪಡಿಸಬಹುದು ಎಂದರೆ ಸರಿ. 2 ಮತ್ತು 3 ನೇ ಪ್ರತಿವಾದಿಗಳು ಬೇರೆ ಬೇರೆ ವಾಸವಾಗಿದ್ದು ಸದರಿಯವರಿಗೂ ಸಹಾ ಪಡಿತರ ಚೀಟಿ ಬೇರೆ ಬೇರೆ ಆಗಿರುತ್ತದೆ ಎಂದರೆ ಸಾಕ್ಷಿಯು ಅವರು ವಿಭಾಗ ಆದ ನಂತರ ಪ್ರತ್ಯೇಕವಾಗಿ ಪಡಿತರ ಚೀಟಿಯನ್ನು ಮಾಡಿಸಿಕೊಂಡಿರುತ್ತಾರೆ ಎಂದು ನುಡಿಯುತ್ತಾರೆ. ವಿಭಾಗ ಯಾವಾಗ ಆಗಿರುತ್ತದೆ ಎಂದರೆ ಸಾಕ್ಷಿಯು ಸುಮಾರು 13 ವರುಷಗಳ ಹಿಂದೆ ಆಗಿರುತ್ತದೆ ಎಂದು ನುಡಿಯುತ್ತಾರೆ.

2. ವಿಭಾಗದಲ್ಲಿ ಯಾರಿಗೆ ಯಾವ ಆಸ್ತಿ ಹೋಗಿರುತ್ತದೆ ಎಂದರೆ ಸಾಕ್ಷಿಯು ಸುಳ್ಳು ವಿಭಾಗ ಪತ್ರವನ್ನು ಸೃಷ್ಠಿಸಿ ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತಾರೆ ಎಂದು ನುಡಿಯುತ್ತಾರೆ. ನಾನು ಪ್ರತಿವಾದಿಗಳು ನ್ಯಾಯಾಲಯಕ್ಕೆ ಹಾಜರುಪಡಿಸಿದ ವಿಭಾಗ ಪತ್ರವನ್ನು ನೋಡಿರುತ್ತೇನೆ. ಸದರಿ ವಿಭಾಗ ಪತ್ರದಲ್ಲಿ ಯಾವ ಆಸ್ತಿ ಯಾರಿಗೆ ಹೋಗಿರುತ್ತದೆ ಎಂದು ತಿಳಿದುಕೊಂಡಿದ್ದೀರಾ ಎಂದರೆ ಸಾಕ್ಷಿಯು ನನಗೆ ಓದು ಬರಹ ಬರುವುದಿಲ್ಲ ಎಂದು ನುಡಿಯುತ್ತಾರೆ. ನನ್ನ ತಂದೆ ಅನಕ್ಷರಸ್ಥರಾಗಿದ್ದರು. ನನ್ನ ತಂದೆಯವರು ಕೆರೆಯಲ್ಲಿ ಮೀನುಗಾರಿಕಾ ಟೆಂಡರುಗಳನ್ನು ಮೀನುಗಾರಿಕಾ ಇಲಾಖೆಯಿಂದ ಪಡೆದುಕೊಳ್ಳುತ್ತಿದ್ದರು ಎಂದರೆ ಸುಳ್ಳು.

3. ದಿನಾಂಕ 28-2-2001 ರ ಕ್ರಯಪತ್ರದಂತೆ 2 ಮತ್ತು 3 ನೇ ಪ್ರತಿವಾದಿಗಳು ಜಂಟಿಯಾಗಿ ಎಂ.ಎಸ್.ಗುರುರಾಜ್ ರವರಿಂದ ಸರ್ವೆ ನಂ 69/7 ರಲ್ಲಿರುವ 1 ಎಕರೆ 36 ಗುಂಟೆ

This is a True Copy of the Court Records Online. Authenticated @ districts.ecourtsindia.com/cnr/KASM500008282012/truecopy/order-7.pdf

ಆಸ್ತಿಯನ್ನು ಖರೀದಿಸಿದ್ದಾರೆ ಎಂದರೆ ಸಾಕ್ಷಿಯು ಸದರಿಯವರು ನಮ್ಮ ಒಟ್ಟು ಕುಟುಂಬದ ಆಸ್ತಿಯಿಂದ ಖರೀದಿಸಿರುತ್ತಾರೆ ಎಂದು ನುಡಿಯುತ್ತಾರೆ. ಸದರಿಯವರು ನಮ್ಮ ಒಟ್ಟು ಕುಟುಂಬದ ವತಿಯಿಂದ ಕ್ರಯದ ಮೊಬಲಗನ್ನು ಪಾವತಿಸಿರುತ್ತಾರೆ ಎನ್ನುವುದಕ್ಕೆ ದಾಖಲೆಗಳು ಇವೆಯೇ ಎಂದರೆ ಸಾಕ್ಷಿ ನಮ್ಮ ತಂದೆಯವರು ಪಾವತಿ ಮಾಡಿರುತ್ತಾರೆ ಎಂದು ನುಡಿಯುತ್ತಾರೆ . ನಮ್ಮ ತಂದೆಯವರು ಕ್ರಯದ ಮೊಬಲಗನ್ನು ಪಾವತಿ ಮಾಡಿರುತ್ತಾರೆ ಎಂದು ತೋರಿಸಲು ದಾಖಲಾತಿಗಳು ಇವೆಯೇ ಎಂದರೆ ಸಾಕ್ಷಿಯು ದಾಖಲಾತಿಗಳು ಇವೆ ಎಂದು ನುಡಿಯುತ್ತಾರೆ.

4. ದಿನಾಂಕ 28-2-2001 ರ ಕ್ರಯಪತ್ರದಲ್ಲಿ 2 ಮತ್ತು 3 ನೇ ಪ್ರತಿವಾದಿಗಳೇ ಕ್ರಯದ ಮೊಬಲಗನ್ನು ಪಾವತಿಸಿದ್ದಾರೆ ಎಂದು ಬರೆಯಲಾಗಿದೆ ಎಂದರೆ ಸಾಕ್ಷಿಯು ಸದರಿ ಮೊತ್ತವನ್ನು ನನ್ನ ತಂದೆಯವರೇ ಪಾವತಿಸಿರುತ್ತಾರೆ ಎಂದು ನುಡಿಯುತ್ತಾರೆ. ಸದರಿ ಮೊತ್ತವನ್ನು ನನ್ನ ತಂದೆಯವರು ಪಾವತಿಸಿದ ಬಗ್ಗೆ ದಾಖಲೆಗಳು ಇವೆ. ಅದನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ನಂತರ ಸದರಿ ಆಸ್ತಿಯನ್ನು 2 ಮತ್ತು 3 ನೇ ಪ್ರತಿವಾದಿಗಳು ದಿನಾಂಕ 20.12.2019 ರ ನೋಂದಾಯಿತ ವಿಭಾಗ ಪತ್ರದ ಮೂಲಕ ವಿಭಾಗ ಮಾಡಿಕೊಂಡಿರುತ್ತಾರೆ ಎಂದರೆ ಸುಳ್ಳು. ಆ ಪ್ರಕಾರ ಖಾತೆ , ಪಹಣಿಗಳು ಬದಲಾವಣೆ ಆಗಿದೆ ಎಂದರೆ ಸಾಕ್ಷಿಯು ನನಗೆ ಮೋಸ ಮಾಡುವ ಉದ್ದೇಶದಿಂದ ಸುಳ್ಳು ವಿಭಾಗ ಪತ್ರವನ್ನುಸೃಷ್ಠಿಸಿ ಖಾತೆ ಬದಲಾವಣೆ ಮಾಡಿಸಿಕೊಂಡಿರುತ್ತಾರೆ ಎಂದು ನುಡಿಯುತ್ತಾರೆ. ನಂತರ ಸದರಿ ಆಸ್ತಿಯನ್ನು 38 ಗುಂಟೆ ಮತ್ತು 38 ಗುಂಟೆಗಳಂತೆ 2 ಮತ್ತು 3 ನೇ ಪ್ರತಿವಾದಿಯರ ಹೆಂಡತಿ ಹೆಸರಿಗೆ ಅಂದರೆ 5 ಮತ್ತು 6 ನೇ ಪ್ರತಿವಾದಿಯರ ಹೆಸರಿಗೆ ದಿನಾಂಕ 15-9-2020 ರ ನೋಂದಾಯಿತ ದಾನಪತ್ರದ ಮೂಲಕ ದಾನ ಮಾಡಲಾಗಿದೆ ಎಂದರೆ ಸಾಕ್ಷಿಯು ಸುಳ್ಳು ದಾನಪತ್ರ ಸೃಷ್ಠಿಸಿ ಆಸ್ತಿಯನ್ನು ದಾನ ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ಸದರಿ ದಾನಪತ್ರದಂತೆ 5 ಮತ್ತು 6 ನೇ ಪ್ರತಿವಾದಿಗಳ ಹೆಸರಿಗೆ ಆಸ್ತಿಯ ಖಾತೆ ಪಹಣಿ ಆಗಿವೆ ಎಂದರೆ ಮೇಲ್ಮನವಿ ಬಾಕಿ ಇರುವಾಗ ಸದರಿ ಖಾತೆ ಪಹಣಿಗಳನ್ನು ಬದಲಾಯಿಸಿಕೊಂಡಿದ್ದಾರೆ ಎಂದು ನುಡಿಯುತ್ತಾರೆ. ಸದರಿ ಮೇಲ್ಮನವಿಯಲ್ಲಿ ತಡೆಯಾಜ್ಞೆ ಇರಲಿಲ್ಲ ಎಂದರೆ ಸರಿಯಲ್ಲ. 5 ಮತ್ತು 6 ನೇ ಪ್ರತಿವಾದಿಗಳು ನನ್ನ ಮತ್ತು ನನ್ನ ಮಕ್ಕಳ

This is a True Copy of the Court Records Online. Authenticated @ districts.ecourtsindia.com/cnr/KASM500008282012/truecopy/order-7.pdf

ವಿರುದ್ಧ ನಿರ್ಬಂಧಕಾಜ್ಞೆ ಕೋರಿ ಅಸಲು ದಾವೆ ನಂ 229/2022 ಹಾಗೂ 232/2022 ನ್ನು ದಾಖಲಿಸಿರುತ್ತಾರೆ ಎಂದರೆ ಸರಿ. ಸದರಿ ದಾವೆಯಲ್ಲಿ ನಾನು ವಕೀಲರ ಮೂಲಕ ಹಾಜರಾಗಿರುತ್ತೇನೆ. ಸದರಿ ದಾವೆಯಲ್ಲಿ ತಾತ್ಕಾಲಿಕ ನಿರ್ಬಂಧಕಾಜ್ಞೆ ಆದೇಶ ಆಗಿರುತ್ತದೆ ಎಂದರೆ ಸರಿ. ಸದರಿ ಆದೇಶವನ್ನು ಪ್ರಶ್ನಿಸಿ ನಾನು ಎಂಎ 34/2023 ಹಾಗೂ 35/2023 ರಂತೆ ಮೇಲ್ಮನವಿಯನ್ನು ಸಲ್ಲಿಸಿರುತ್ತೇನೆ ಎಂದರೆ ಸರಿ. ಸದರಿ ಮೇಲ್ಮನವಿಯಲ್ಲಿ ದಾವಾ ಆಸ್ತಿಯ ಮೇಲೆ ಎಲ್ಲರಿಗೂ ಹಕ್ಕು ಇರುತ್ತದೆ ಎಂದು ಆದೇಶ ಆಗಿರುತ್ತದೆ. ಸದರಿ ಮೇಲ್ಮನವಿಯಲ್ಲಿ ಎಲ್ಲರಿಗೂ ಹಕ್ಕು ಇದೆ ಎಂದು ಆದೇಶ ಆಗಿರುವ ವಿಚಾರ ಸುಳ್ಳು ಎಂದರೆ ಸರಿಯಲ್ಲ.

5. ಎಂಎ 34/2023 ಹಾಗೂ 35/2023 ಪ್ರಶ್ನಿಸಿ 5 ಮತ್ತು 6 ನೇ ಪ್ರ 2 ವಾದಿಗಳು ಡಬ್ಲ್ಯು ಪಿ ನಂ 21587/2024 ಮತ್ತು 21375/2024 ನ್ನು ದಾಖಲಿಸಿರುತ್ತಾರೆ ಎಂದರೆ ಸಾಕ್ಷಿಯು ನಾನು ಉಚ್ಛ ನ್ಯಾಯಾಲಯದಲ್ಲಿ ಪ್ರಶ್ನಿಸಿರುತ್ತೇನೆ ಎಂದು ನುಡಿಯುತ್ತಾರೆ. ಎರಡೂ ರಿಟ್ ಅರ್ಜಿಗಳಲ್ಲಿ ತಡೆಯಾಜ್ಞೆ ಇದೆ ಎಂದರೆ ಸರಿ. ಈದಾವೆಯನ್ನು ನಾನು 2012 ರಲ್ಲಿ ದಾಖಲಿಸಿದ್ದೇನೆ ಎಂದರೆ ಸಾಕ್ಷಿಯು ದಾವೆಯನ್ನುದಾಖಲಿಸಿ 12 ವರುಷಕ್ಕಿಂತ ಹೆಚ್ಚು ಆಗಿರುತ್ತದೆ ಎಂದು ನುಡಿಯುತ್ತಾರೆ.

6. ತೊಗರ್ಸಿ ಗ್ರಾಮದ ಆಸ್ತಿಗೆ ಸಂಬಂಧಿಸಿ ಖಾತೆ ಬದಲಾವಣೆ ಕೋರಿ ನಾನು ಯಾವುದೇ ಅರ್ಜಿಯನ್ನು ಸಲ್ಲಿಸಿರುವುದಿಲ್ಲ. ಜಯಪ್ಪ ಬಿನ್ ಭದ್ರುಪ್ಪ ತೊಗರ್ಸಿ ಗ್ರಾಮ ಎಂದರೆ ನಾನೇ ಆಗಿರುತ್ತೇನೆ. ಲಕ್ಷ್ಮೀ ಕೊಂ ಬಸವರಾಜಪ್ಪ ಎಂದರೆ 6 ನೇ ಪ್ರತಿವಾದಿ ಎಂದರೆ ಸರಿ. ನಾನು ಕೊಟ್ಟ ಖಾತೆ ಬದಲಾವಣೆ ಕೋರಿ ದಿನಾಂಕ 23.4.2014 ರಂದು ಸಲ್ಲಿಸಿದ ಅರ್ಜಿಯ ಮೇರೆಗೆ 6 ನೇ ಪ್ರತಿವಾದಿಯ ಹೆಸರಿಗೆ ಸಭಾ ನಡಾವಳಿ ಆಗಿ ಖಾತೆ ಬದಲಾವಣೆ ಆಗಿದ್ದು ನಾನು ಸದರಿ ಬದಲಾವಣೆಗೆ ನನ್ನ ತಕರಾರು ಇಲ್ಲ ಎಂದು ಸಲ್ಲಿಸಿರುತ್ತೇನೆ ಎಂದರೆ ಸುಳ್ಳು.

7. ಈ ಮೇಲೆ ಹೇಳಿದಂತೆ ಖಾತೆ ಬದಲಾವಣೆ ಆದ ಆಸ್ತಿಯಲ್ಲಿ 3 ಮತ್ತು 6 ನೇ ಪ್ರತಿವಾದಿಗಳು ಮನೆಯನ್ನು ಕಟ್ಟಿಕೊಂಡು ವಾಸಿಸುತ್ತಿದ್ದಾರೆ ಎಂದರೆ ಸುಳ್ಳು. ಸದರಿ

This is a True Copy of the Court Records Online. Authenticated @ districts.ecourtsindia.com/cnr/KASM500008282012/truecopy/order-7.pdf

www.ecourtsindia.com

ಆಸ್ತಿಯಲ್ಲಿ ಮನೆ ಇದೆ ಎಂದರೆ ಸರಿ. ಸಾಕ್ಷಿ ಮುಂದುವರೆದು ಆ ಮನೆಯಲ್ಲಿ ನನ್ನ ತಾಯಿ ವಾಸಿಸುತ್ತಿದ್ದಾರೆ ಎಂದು ನುಡಿಯುತ್ತಾರೆ. ನಮ್ಮ ತಾಯಿಯು ಸದರಿ ಮನೆಯಲ್ಲಿ ಒಬ್ಬರೇ ವಾಸವಾಗಿದ್ದಾರೆ . ನನ್ನ ತಾಯಿ ಹೆಸರಿಗೆಪಡಿತರ ಚೀಟಿ ಪ್ರತ್ಯೇಕವಾಗಿ ಇದೆಯೇ ಎಂದರೆ ಸಾಕ್ಷಿ ಇತ್ತೀಚೆಗೆ 10-12 ವರುಷಗಳಿಂದ ಸದರಿ ಮಾಹಿತಿ ಇಲ್ಲ ಎಂದು ನುಡಿಯುತ್ತಾರೆ.

8. ನನ್ನ ತಂದೆ ಕೆಲವು ಜಮೀನುಗಳನ್ನು ನೋಂದಾಯಿತ ಕ್ರಯಪತ್ರದ ಮೂಲಕ ಖರೀದಿಸಿರುತ್ತಾರೆ ಎಂದರೆ ಸರಿ. ನನ್ನ ತಂದೆಯವರು ಆನಂದಪ್ಪರವರಿಂದ ಮನೆಜಾಗವನ್ನು ಖರೀದಿಸಿದ್ದಾರೆ ಎಂದರೆ ಸರಿ. ಸದರಿ ಕ್ರಯಪತ್ರಕ್ಕೆ ನನ್ನ ತಂದೆಯವರು ಸಹಿ ಮಾಡಿದ್ದಾರೆ ಎಂದರೆ ಸಾಕ್ಷಿಯುನನ್ನ ತಂದೆ ಎಡಗೈ ಹೆಬ್ಬೆಟ್ಟಿನ ಗುರುತನ್ನು ಹಾಕುತ್ತಾರೆ ಎಂದು ನುಡಿಯುತ್ತಾರೆ. ಸದರಿ ಕ್ರಯಪತ್ರವು ಉಪ ನೋಂದಣಾಧಿಕಾರಿಗಳ ಕಚೇರಿಯಲ್ಲಿ ಲಭ್ಯ ಇರುತ್ತದೆ ಎಂದರೆ ಸರಿ. ಸದರಿ ಕ್ರಯಪತ್ರವನ್ನು ನೋಡಿ ನಮ್ಮ ತಂದೆಯವರು ಸಹಿ ಮಾಡಿರುತ್ತಾರೋ ಅಥವಾ ಎಡಗೈ ಹೆಬ್ಬೆಟ್ಟಿನ ಗುರುತನ್ನು ಗುರುತಿಸಬಹುದು ಎಂದರೆ ಸರಿಯಲ್ಲ.

9. ಶ್ರೀಧರ ನನ್ನ ಚಿಕ್ಕಪ್ಪನ ಮಗ. ಸದರಿಯವರು 2 ನೇ ಹೆಚ್ಚುವರಿ ನ್ಯಾಯಾಲಯದಲ್ಲಿ ಅ.ದಾವೆ ಸಂಖ್ಯೆ 282/2022 ದಾವೆಯನ್ನು ದಾಖಲಿಸಿದ್ದಾರೆ ಎಂದರೆ ಸರಿ. ಸದರಿ ದಾವೆಯಲ್ಲಿ ನಾನು2 ನೇ ಪ್ರತಿವಾದಿ ಎಂದರೆ ಸರಿ. ಅದರಲ್ಲಿ ನಾನು ವಕೀಲರ ಮೂಲಕ ಹಾಜರಾಗಿರುತ್ತೇನೆ ಎಂದರೆ ಸರಿಯಲ್ಲ. ಸದರಿ ದಾವೆಯಲ್ಲಿ ನನ್ನ ಪರವಾಗಿ ಶ್ರೀ ವಸಂತಪ್ಪ ವಕೀಲರು ಹಾಜರಾಗಿರುತ್ತಾರೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು ನಾನು ಇನ್ನೂ ಶ್ರೀಧರರವರು ದಾಖಲಿಸಿರುವ ದಾವೆಯಲ್ಲಿ ವಕೀಲರಿಂದ ವಕಾಲತ್ತನ್ನು ಹಾಜರು ಪಡಿಸಿರುವುದಿಲ್ಲ ಎಂದು ನುಡಿಯುತ್ತಾರೆ. ಅಸಲು ದಾವೆ ನಂ 282/2022 ರಲ್ಲಿ ಈ ದಾವೆಯಲ್ಲಿರುವದಾವಾಸ್ತಿಗಳನ್ನು ಸೇರಿಸಿ ದಾಖಲಾಗಿಸಲಾಗಿದೆ ಎಂದರೆ ಸರಿ. ಸಾಕ್ಷಿ ಮುಂದುವರೆದು ಸದರಿ ದಾವೆಯ ಸಂಪೂರ್ಣ ಮಾಹಿತಿ ಇಲ್ಲ ಎಂದು ನುಡಿಯುತ್ತಾರೆ .

10 ನಮಗೆ ಕೆಲವು ಪಿತ್ರಾರ್ಜಿತ ಆಸ್ತಿಗಳು ಇವೆ ಎಂದರೆ ಸರಿ. ಸದರಿ ಆಸ್ತಿಗಳ ಪೈಕಿ , ವಾಸದ ಮನೆ ಮತ್ತು ಕೃಷಿ ಜಮೀನುಗಳು ಇವೆ ಎಂದರೆ ನನಗೆ ಸದರಿ ಆಸ್ತಿಗಳ ಮಾಹಿತಿ ಇಲ್ಲ .

This is a True Copy of the Court Records Online. Authenticated @ districts.ecourtsindia.com/cnr/KASM500008282012/truecopy/order-7.pdf
www.ecourtsindia.com

ಪಿತ್ರಾರ್ಜಿತವಾಗಿ ಬಂದ ಕೃಷಿಯೇತರ ಜಮೀನುಗಳು ಇವೆ ಎಂದರೆ ಸರಿ. ನಾನು ನನ್ನ ಪಾಟೀ ಸವಾಲಿನಲ್ಲಿ ಪಿತ್ರಾರ್ಜಿತವಾಗಿ ಬಂದ ಆಸ್ತಿಗಳ ಸರ್ವೆ ನಂಬರನ್ನು ಹೇಳಲು ಆಗುವುದಿಲ್ಲ , ಆದರೆ ಜಮೀನುಗಳ ಹೆಸರನ್ನು ಹೇಳಬಲ್ಲೆ ಎಂದು ನುಡಿಯುತ್ತಾರೆ. ಸದರಿ ದಿನ ಪಾಟೀ ಸವಾಲಿನಲ್ಲಿ ಕಣಸೋಗಿ ಗ್ರಾಮದ ದೊಡ್ಡಗದ್ದೆ ಜಮೀನಿನಲ್ಲಿ ಎರಡುಮುಕ್ಕಾಲು ಆಸ್ತಿ ಇರುತ್ತದೆ , ಊರ ಮುಂದಿನ ಜಮೀನಿನಲ್ಲಿ 2 ಎಕರೆ ಇರುತ್ತದೆ , ಕಣಸೋಗಿ ಗ್ರಾಮದ ನರಸಾಪುರದ ಹತ್ತಿರ 2 ಎಕರೆ ಜಮೀನು ಇದೆ ಹಾಗೂ ಕಣಸೋಗಿಯಲ್ಲಿ ಪಿತ್ರಾರ್ಜಿತವಾಗಿ ಬಂದ ಎರಡು ಮನೆ ಆಸ್ತಿ ಇವೆ ಎಂದರೆ ಸರಿ. ಸದರಿ ಆಸ್ತಿಗಳನ್ನು ಈ ದಾವೆಯಲ್ಲಿ ಸೇರಿಸಿಲ್ಲ ಎಂದರೆ ಸರಿ. ಸದರಿ ಬಿಟ್ಟು ಹೋದ ಆಸ್ತಿಗಳನ್ನು ತಿದ್ದುಪಡಿ ಮೂಲಕ ಸೇರಿಸಿದ್ದೀರಾ ಎಂದರೆ ಸಾಕ್ಷಿಯು ನನಗೆ ಓದು ಬರಹ ಬರುವುದಿಲ್ಲ ಎಂದು ನುಡಿಯುತ್ತಾರೆ. ನನ್ನ ವಕೀಲರಿಗೆ ಸದರಿ ಆಸ್ತಿಗಳು ಬಿಟ್ಟು ಹೋದಬಗ್ಗೆ ಮಾಹಿತಿಯನ್ನು ಕೊಟ್ಟಿದ್ದೀರಾ ಎಂದರೆ ನಾನು ಕೊಟ್ಟಿರುವುದಿಲ್ಲ ಎಂದು ನುಡಿಯುತ್ತಾರೆ. ಅಸಲು ದಾವಾ 280/2022 ರಲ್ಲಿ ಶ್ರೀಧರರವರು ನಾನು ಈ ಮೇಲೆ ಹೇಳಿದ ಆಸ್ತಿಗಳು ವಿಭಾಗ ಆಗಿರುವುದಿಲ್ಲ ಹಾಗಾಗಿ ಅವರೆಡೂ ಆಸ್ತಿಗಳನ್ನು ಕೋರಿ ದಾವೆ ಸಲ್ಲಿಸಿರುತ್ತಾರೆ ಎಂದು ನುಡಿಯುತ್ತಾರೆ. ಮೇಲೆ ಹೇಳಿದ ಪಿತ್ರಾರ್ಜಿತ ಆಸ್ತಿಗಲ್ಲಿ ನಮ್ಮ ತಂದೆಗೆ ಹಕ್ಕು ಇದೆ ಎಂದರೆ ನನಗೆ ಮಾಹಿತಿ ಇಲ್ಲ. ಮೇಲೆ ಹೇಳಿದ ಪಿತ್ರಾರ್ಜಿತ ಆಸ್ತಿಗಳಲ್ಲಿ ನೀವು ಹಿಸ್ಸೆಯನ್ನು ಕೇಳುತ್ತೀರೋ ಇಲ್ಲವೋ ಎಂದರೆ ಸಾಕ್ಷಿಯು ಮುಂದೆ ವಕಾಲತ್ತನ್ನು ಹಾಕಿ ತಕರಾರನ್ನು ಸಲ್ಲಿಸುತ್ತೇನೆ ಎಂದು ನುಡಿಯುತ್ತಾರೆ. ಸದರಿ ದಾವೆಯಲ್ಲಿ ನಾನು ಶ್ರೀ ವಸಂತಪ್ಪ ವಕೀಲರಿಂದ ವಕಾಲತ್ತನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ಶ್ರೀಧರ ರವರ ವಿಭಾಗ ಕೂರಿ ಸಲ್ಲಿಸಿರು ದಾವೆ ವಿಚಾರ ತಿಳಿದಿದ್ದರೂ ಶ್ರೀಧರರವರೊಂದಿಗೆ ಶಾಮೀಲಾಗಿ ಈ ದಾವೆಯಲ್ಲಿ ಮೇಲೆ ಹೇಳಿದ ಪಿತ್ರಾರ್ಜಿತ ಆಸ್ತಿಗಳನ್ನು ಸೇರಿಸಿರುವುದಿಲ್ಲ ಎಂದರೆ ಸುಳ್ಳು.

11. ನನ್ನ ಸಹೋದರರಿಗೆ ತೊಂದರೆ ಕೊಡುವ ಉದ್ದೇಶದಿಂದ ಸದರಿಯವರು ಸ್ವಂತ ಹಣದಿಂದ ಖರೀದಿ ಮಾಡಿದ ಸ್ವಯಾರ್ಜಿತ ಆಸ್ತಿಗಳಲ್ಲಿ ಮೋಸ ಮಾಡಿ ಪಾಲು ಪಡೆದುಕೊಳ್ಳುವ ದುರುದ್ದೇಶದಿಂದ ಈ ದಾವೆಯನ್ನು ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ದಾವಾ ಎರಡನೇ ಆಸ್ತಿ ಸರ್ವೆ ನಂ 69/7 ಪ್ರತಿವಾದಿಗಳ ಸ್ವಯರ್ಜಿತ ಆಸ್ತಿ ಎಂದರೆ

This is a True Copy of the Court Records Online. Authenticated @ districts.ecourtsindia.com/cnr/KASM500008282012/truecopy/order-7.pdf

www.ecourtsindia.com

ಸರಿಯಲ್ಲ. ನನ್ನ ತಂದೆಯವರಿಗೆ ಓದು ಬರಹ ಬರುತ್ತಿದ್ದರೂ ನಾನು ಸದರಿಯವರು ಸಹಿ ಮಾಡುತ್ತಿರಲಿಲ್ಲ ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ತಂದೆಯವರು ಖರೀದಿಸಿದ ಆಸ್ತಿಗಳಿಗೆ ಸಂಬಂಧಿಸಿದ ಕ್ರಯಪತ್ರಗಳಿಗೆ ನನ್ನ ತಂದೆಯವರು ಖುದ್ದಾಗಿ ಸಹಿ ಮಾಡಿರುತ್ತಾರೆ ಎಂದರೆ ಸುಳ್ಳು. ನಾನು ಒಟ್ಟು ಕುಟುಂಬಕ್ಕೆ ಸೇರಿದ ಎಲ್ಲಾ ಆಸ್ತಿಗಳನ್ನು ಸೇರಿಸಿ ಹಾಕಿದ ದಾವೆ ಕಾನೂನು ರೀತಿಯಲ್ಲಿ ನಿಲ್ಲತಕ್ಕದ್ದಲ್ಲ ಎಂದರೆ ಸರಿಯಲ್ಲ.

ಓ.ಹೇ.ಕೇ.ಸರಿಯಿದೆ.

( ಮರು ವಿಚಾರಣೆ ಇಲ್ಲ)

(ತೆ.ನ್ಯಾ.ಸಾ.ಹೇ.ಬೆ.ಮಾಡಲಾಯಿತು).

1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ ಶಿಕಾರಿಪುರ.

This is a True Copy of the Court Records Online. Authenticated @ districts.ecourtsindia.com/cnr/KASM500008282012/truecopy/order-7.pdf